ಊರಿಗೆ ವಾಪಸ್ಸು ಬಂದ ತಂಗ್ಯ ಗಬಗಬ ಹಿಟ್ಟುಂಡು ಕರೆಂಟ್ ರೂಮಿನ ಹತ್ತಿರ ಹೋಗಿ ರಾಗಿ ಹೊಲಕ್ಕೆ ನೀರು ಎತ್ತಿದ. ಪರೀಕ್ಷೆ ಮಾಡಲೆಂದು ನಿರ್ಮಲಳ ನಂಬರುಗಳನ್ನು ಒತ್ತಿದ. ಆ ಕಡೆಯಿಂದ, ''ನೀವು ಪ್ರಯತ್ನಿಸುತ್ತಿರುವ ಗ್ರಾಹಕರು ಬೇರೊಂದು ಕರೆಯಲ್ಲಿ ನಿರತರಾಗಿದ್ದಾರೆ.'' ಎಂಬ ಧ್ವನಿ ಕೇಳಿ ಬಂದಿತ್ತು. ಸುಮಾರು ಐದಾರು ಸಾರಿ ಒತ್ತಿದ್ದರೂ ಪಾಷಾನ ಮೈಕ್ ಸೆಟ್ಟಿನಲ್ಲಿ ಹಳೆ ಹಾಡುಗಳು ರಿಪೀಟ್ ಆಗುವಂತೆ ಅದೇ ರಿಪೀಟ್ ಆಗುತ್ತಿತ್ತು. ಹಾಗಾಗಿ ಜೇಬಿಗೆ ಹಾಕಿಕೊಂಡು ಸನಿಕೆ ಹಿಡಿದ. ಅಷ್ಟರಲ್ಲಿ ಫೋನ್ ತಾನೇ ಕೇಕೆ ಹಾಕಿತ್ತು. ತಂಗ್ಯ ಖುಷಿಯಿಂದ ಹಲೋ ಎಂದ. ''ಹಲೋ ಹಲೋ ಯಾರು?'' ಆ ಕಡೆಯಿಂದ ಮಾಧುರ್ಯದ ಧ್ವನಿ. ''ನಾನು, ನಾನು.'' ಎಂದ ತಂಗ್ಯ. ''ನಾನು ಅಂದ್ರೆ ಯಾರು?'' ಮತ್ತೆ ಕೋಮಲವಾದ ಪ್ರಶ್ನೆ. ''ನಾನೇ, ಅದೇ ನಿನ್ನ ಮದ್ವೆ ಆಗೋ ಗಂಡು.'' ಮುಲುಗುಟ್ಟಿದ್ದ ತಂಗ್ಯ. ''ಓಹ್, ನೀವಾ. ಈಗ್ತಾನೆ ನಿಮ್ಮುನ್ನೆ ನೆನೆಸಿಕೊಳ್ತಿದ್ದೆ. ಏನು ಮಾಡ್ತ ಇದ್ದೀರಿ.'' ವಿಚಾರಿಸಿಕೊಂಡಿದ್ದಳು. ''ರಾಗಿ ಹೊಲಕ್ಕೆ ನೀರು ಕಟ್ಟೋಕೆ ಬಂದೆ.'' ಎಂದ. ''ಊಟ ಮಾಡಿದ್ರಾ?'' ಮತ್ತೆ ಉಲಿದಿತ್ತು ಗಿಳಿ. ''ಊಂ ಹುರುಳಿಕಾಳು ಬಸ್ಸಾರು ಮುದ್ದೆ ಉಂಡ್ ಬಂದೆ.'' ತಂಗ್ಯ ಅವಳಂತೆ ನಾಜೂಕಾಗಿ ಮಾತನಾಡಲು ಪ್ರಯತ್ನಿಸಿದ. ''ನಾನು ಯಂಗಿದ್ದೀನಿ?'' ಕೇಳಿದ್ದಳು ಭಾವಿ ಪತ್ನಿ. ''ಸೂಪರ್, ಬೊಂಬಾಟ್. ಮೊನ್ನೆ ಮಹೇಶ್ ಬಾಬುದು ಶ್ರೀಮಂತುಡು ಸಿನಿಮಾಕ್ಕೆ ಹೋಗಿದ್ದೆ. ನೀನು ಥೇಟ್ ಅದ್ರಾಗಿನ ಹಿರೋಯಿನ್ ಥರಾನೇ ಇದ್ದೀಯ. ಮತ್ತೆ ನಾನೆಂಗಿದ್ದೀನಿ ಹೇಳ್ಮತ್ತೆ.'' ಉತ್ತೇಜಿತನಾಗಿ ಕೇಳಿದ್ದ. ''ನೀವು ಸೇಮ್ ಟು ಸೇಮ್ ಪ್ರಿನ್ಸ್ ಮಹೇಶ್ ಬಾಬು ಥರಾನೇ.'' ಎಂದಿದ್ದಳು. ಅವಳ ಮಾತುಗಳು ತಂಗ್ಯನ ಮೈತುಂಬಾ ಚಕ್ಕಲಗುಲಿ ಇಟ್ಟಿದ್ದವು. ಹೀಗೆ ಶುರುವಾದ ಮಾತುಕತೆಗಳು ಮುಂದೆ ಎಲ್ಲೆಲ್ಲೋ ಹೋಗಿಬಿಟ್ಟಿದ್ದವು. ತಂಗ್ಯನಿಗೆ ಮದುವೆ ಸೆಟ್ಟಾದ ಮ್ಯಾಟರ್ರು, ತಂಗ್ಯ ಮೊಬೈಲ್ ಫೋನ್ ತಗೊಂಡ ಮ್ಯಾಟರ್ರು ಇಡೀ ಊರಾದ ಊರಿಗೇ ಆವೊತ್ತು ಸಾಯಿಂಕಾಲ ಸೂರ್ಯ ಮುಳುಗುವ ಹೊತ್ತಿಗೆ ಇಲಿ ಸತ್ತ ಗಬ್ಬು ವಾಸನೆಯಂತೆ ಬಲುಬೇಗ ಹರಡಿಕೊಂಡಿತ್ತು. ''ಏನೋ ತಂಗ್ಯ ಮೊಬೈಲ್ ಕಂಡ್ರೆ ಎಗರಿ ಬೀಳ್ತಿದ್ದೆ, ಈಗ ಯಂಗೈತೆ ಅದ್ರ್ ಗಮ್ಮತ್ತು.'' ''ಮೊಬೈಲ್ ಕಂಡ್ರೆ ನಿರ್ವಾಕ್ವಿಲ್ದಂಗೆ ಆಡ್ತಿದ್ದೆ, ಈಗ ನೀನೂ ಅದ್ರ್ ತಿಕ ಮೂಸೋಕೆ ಶುರು ಮಾಡ್ದ.'' ಎಂದು ಎದುರಿನಲ್ಲಿಯೇ ರೇಗಿಸುತ್ತಿದ್ದರಲ್ಲದೆ ಮರೆಯಲ್ಲಿ, ''ತಂಗ್ಯನ ಹೆಂಡತಿಯಾಗಿ ಬರೋಳು ಇವ್ನಿಗಿಂಥ ದೊಡ್ಡೋಳಂತೆ. ಅಯ್ಯಯ್ಯಪ್ಪ ಯಂಗ್ ಸಂಭಾಳಿಸ್ತಾನಪ್ಪ. ಅವ್ಳು ಇವ್ನುನ್ನ ಹಿಂಡಿ ಹಿಪ್ಪೆಕಾಯಿ ಮಾಡ್ದಿದ್ರೆ ಅವಾಗ್ ಕೇಳ್ರಿ.''

''ಗಂಡಿಗಿಂತ ಹೆಣ್ಣು ದೊಡ್ಡೋಳಾದ್ರೆ ಮೋಹಿನಿ ಥರ ಗಂಡ್ಸಿನ ಸಕ್ತೀನ ಸೊರ ಸೊರ ಹೀರಿಬಿಡ್ತಾಳಂತೆ.'' ''ತಂಗ್ಯ ಬಲು ನಿಗುರ್ತಿದ್ದ, ಇನ್ಮೇಲೆ ಗೊತ್ತಾಗ್ತೈತೆ ಅಪ್ಪಯ್ಯನಿಗೆ ಅಮ್ಮಣಿಕ್ಕನ ಬೊಂಡ.'' ''ಇವ್ನು ತಂಗ್ಯ ಒಂಬತ್ತನೇ ಕ್ಲಾಸ್ ಫೇಲು, ಆ ಹುಡ್ಗಿ ಅಕ್ಕನ ಮನೇಲಿ ಇದ್ಕಂಡು ತುಮಕೂರ್ನಾಗೆ ಬಿ.ಎ. ಓದ್ತಿದ್ಲಂತೆ. ಈ ಪಿಸ್ನಾರಿ ಹತ್ರ ಅದೇನ್ ಉಳ್ಬಾಳ್ತಾಳೋ. ಮುದ್ದನುಮಕ್ಕನಿಗೆ ಮುಂದೆ ಕಾದೈತೆ ಮಾರಿಹಬ್ಬ.'' ''ನನ್ನಂದಾಜು ಬಂದ ಎರ್ಡ್ ತಿಂಗ್ಳಿಗೇ ತಂಗ್ಯನ ತಿಕ್ಕೆ ಆ ಹುಡ್ಗಿ ನಾಮ ಬಳಿದಿದ್ರೆ ಅವಾಗ್ ಕೇಳ್ರಲೆ ನಾನೇನೇಳ್ದೆ ಅಂತ.'' ಮುಂತಾಗಿ ಮಾತನಾಡಿಕೊಂಡು ಮುಸಿಮುಸಿ ನಗುತ್ತಿದ್ದರಲ್ಲದೆ, ಕೆಲವರು ಲೊಚ ಲೊಚ ಲೊಚಗುಟ್ಟುತ್ತಿದ್ದರು.

ಆಷಾಢ ಮಾಸ ಸರಿದ ಮೇಲೆ ಅಂತೂ ಇಂತೂ ಸಾಮಾನ್ಯವಾಗಿ ನಡೆಯುವ ಮದುವೆಗಳಂತೆ ತಂಗ್ಯನ ಮದುವೆಯೂ ಧಾಂಧೂಂ ಎದ್ದೋಯ್ತು. ಹೆಣ್ಣಿನ ಕಡೆಯವರು ಮದುವೆಯಲ್ಲಿ ಬೂಂದಿ ಪಾಯ್ಸ ಮತ್ತು ಜಿಲೇಬಿ ಎರಡು ಥರದ ಸ್ವೀಟ್ಸ್ ಮಾಡಿಸಿ ಎಲ್ಲರಿಂದಲೂ ಸೈ ಅನ್ನಿಸಿಕೊಂಡಿದ್ದರು. ಮುಹೂರ್ತ ಆದ ಮಾರನೇ ದಿನವೇ ನೆಪ್ಚುಯಲ್ ಅರ್ಥಾತ್ ಫಸ್ಟ್ ನೈಟ್ ಇಟ್ಟುಕೊಂಡಿದ್ದರು. ಸದ್ಯ, ಹೆಣ್ಣಿನ ಮನೆಯಲ್ಲಿ ಒಂದು ಸಪರೇಟ್ ರೂಮಿದ್ದುದ್ದರಿಂದ ಫಸ್ಟ್ ನೈಟ್ ಪ್ರೊಗ್ರಾಂಗೆ ಸರಿ